ಇಂದು ದಿನಾಂಕಃ 06.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಪಡಿಸಿರುವಂತಹ ಅಕ್ಕಿಯನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು-1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎನ್ ವಿ ಪಿ ವಕೀಲರಿಂದಃ

ನನಗೆ ಈ ಪ್ರಕರಣಕ್ಕೆ ಸಂಬಂದಿಸಿದಂತೆ ಮಾಹಿತಿ ಬಂದ ಸಮಯದಲ್ಲಿ ಸುತ್ತಕೋಟೆಯಲ್ಲಿ ಇದಿದ್ದು ಆಗ ನನಗೆ ಕರೆ ಬಂದಿರುತ್ತದೆ. ಆಗ ಸಮಯ ಸಂಜೆ 4.30 ಗಂಟೆಯಾಗಿತ್ತು. ಹಂಸಬಾವಿಗೆ ನಾನು ಬಂದಾಗ ಸಂಜೆ 5.15 ಗಂಟೆಯಾಗಿತ್ತು. ಚಾಸಾ-4 ರವರು 5 ಗಂಟೆಯ ಸುಮಾರಿಗೆ ಸ್ಥಳಕ್ಕೆ ಬಂದಿರುತ್ತಾರೆ. ಹಂಸಬಾವಿಯಿಂದ ಲಿಂಗಾಪುರಕ್ಕೆ ಹೋಗಲು ಮೋಟಾರ ಸೈಕಲ್ ನಲ್ಲಿ 10 ನಿಮಿಷಗಳ ಕಾಲ ತೆಗೆದಕೊಳ್ಳುತ್ತದೆ. ನಾವು ಲಿಂಗಾಪುರದ ಶೆಡ್‌ಗೆ ಹೋದಾಗ 5.45 ಗಂಟೆಯಾಗಿತ್ತು. ನಾವು ಹೋದಾಗ ಅಕ್ಕಿಯು ಶೆಡ್ ಒಳಗೆ ಬಾಗಿಲಿನ ಬಳಿ ಇದ್ದವು. ಆ ಬಗ್ಗೆ ನಾನು ನನ್ನ ಪಿರ್ಯಾದಿಯಲ್ಲಿ ನಮೂದಿಸಿರುತ್ತೇನೆ. ಸದರಿ ಅಕ್ಕಿಯನ್ನು ಆರೋಪಿಯೇ ಸದರಿ ಶೆಡ್ ನಲ್ಲಿ ಇಳಿಸಿರುತ್ತಾರೆ ಎಂದು ನನಗೆ ಮಾಹಿತಿ ಬಂದಿರುತ್ತದೆ. ಸದರಿ ಚೀಲಗಳಿಗೆ ಆರೋಪಿಯೇ ಹೊಲಿಗೆ ಹಾಕಲಾಗಿತ್ತು. ಸದರಿ ಚೀಲಗಳಿಗೆ ಹೊಲಿಗೆಗಳನ್ನು ಗೋಡೌನ್ ನಿಂದ ಹೊಲಿಗೆ ಹಾಕಿ ಬಂದ ರೀತಿಯಲ್ಲಿ ಇರಲಿಲ್ಲ.

2. ನಂತರ ನಾವು ಠಾಣೆಗೆ 6.30 ಗಂಟೆಗೆ ಹೋಗಿರುತ್ತೇವೆ. ನಾನು ದೂರನ್ನು ಹೋದ ಠಾಣೆಗೆ ಹೋದ ತಕ್ಷಣ ನೀಡಿರುತ್ತೇನೆ. ನಾನು ಪೋಲಿಸರಿಗೆ ಮೌಖಿಕವಾಗಿ ಹೇಳಿದ್ದು ಪೋಲಿಸರು ಅದನ್ನು ಬೆರಳಚ್ಚು ಮಾಡಿರುತ್ತಾರೆ. ದೂರನ್ನು ಬರೆದುಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಂತರ ನಾನು 7.30 ಗಂಟೆಯ ಸಮಯಕ್ಕೆ ಬಂದಿರುತ್ತೇನೆ. ಪಂಚರನ್ನು ಯಾರು ಕರೆದುಕೊಂಡು ಬಂದರು ಎಂದು ನನಗೆ ನೆನಪಿರುವುದಿಲ್ಲ. ಪಂಚನಾಮೆಯನ್ನು ಬರೆದು ಮುಗಿಸುವಷ್ಟರಲ್ಲಿ ರಾತ್ರಿ 9.30 ಗಂಟೆಯಾಗಿತ್ತು. ಆ ಸಮಯದಲ್ಲಿ ಕತ್ತಲು ಇತ್ತು ಎಂದರೆ ಸಾಕ್ಷಿಯು ವಿದ್ಯುತ್ ದೀಪದ ಬೆಳಕು ಇತ್ತು ಎಂದು ನುಡಿದಿರುತ್ತಾರೆ.

3. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಮಾಹಿತಿ ಬಂದಿಲ್ಲ ಹಾಗೂ ಆರೋಪಿಯ ಶೆಡ್‌ಗೆ ಹೋಗಿಲ್ಲ ಹಾಗೂ ಅಕ್ಷರದಾಸೋಹ ಅಕ್ಕಿ ನಮಗೆ ಸಿಕ್ಕಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು-1 ಅಕ್ಕಿ ಅಕ್ಷರ ದಾಸೋಹಕ್ಕೆ ಸೇರಿದ್ದು ಎಂದು ತೋರಿಸಲು ಯಾವುದೇ ಗುರುತು ಇಲ್ಲ ಎಂದರೆ ಸಾಕ್ಷಿಯು ನಮಗೆ ಅಕ್ಕಿಯನ್ನು ನೋಡಿದ ತಕ್ಷಣ ನಮಗೆ ಗೊತ್ತಾಗುತ್ತದೆ ಎಂದು ನುಡಿದಿರುತ್ತಾರೆ. ನಾವು 4 ಚೀಲಗಳನ್ನು ಜಪ್ತು ಪಡಿಸಿಕೊಂಡಿರುತ್ತೇವೆ ಎಂದರೆ ಸರಿ. ನಂತರ ಅವುಗಳನ್ನು ಗೋಡೌನ್ ಕಳುಹಿಸಿರುತ್ತೇವೆ ಎಂದರೆ ಸರಿ. ನಂತರ ಇತರೆ ಶಾಲೆಗಳಿಗೆ ವಿಲೇವಾರಿ ಮಾಡಿರುತ್ತೇವೆ ಎಂದರೆ ಸರಿ. ಆ ಕಾರಣದಿಂದ ಮುದ್ದೆ ಮಾಲು-1 ಅಕ್ಕಿನೇ ಬೇರೆ ಹಾಗೂ ನಾವು ವಶಪಡಿಸಿಕೊಂಡಂತಹ ಅಕ್ಕಿಯೇ ಬೇರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ 4 ಚೀಲಗಳಿಂದ ಯಾವುದೇ ಸ್ಯಾಂಪಲ್ ನ್ನು ತೆಗೆದಿಲ್ಲ ಎಂದರೆ ಸರಿ. ಆರೋಪಿಯ ವಿರುದ್ದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲಾರಿಯ ಚಾಲಕನಾದ ಭಾಷಾಸಾಬ ಹಾಗೂ ನಮ್ಮ ಇಲಾಖೆಯವರು ಅವರ ಅನಕೂಲಕ್ಕಾಗಿ ಬಿಸಾಕಿ ಹೋಗಿದಂತಹ ಚೀಲಗಳನ್ನು ನಾವು ವಶಪಡಿಸಿಕೊಂಡು ಆರೋಪಿಯ ವಿರುದ್ದ ಸುಳ್ಳು ದೂರನ್ನು ನಿಡೀರುತ್ತೇನೆ ಎಂದರೆ ಸರಿಯಲ್ಲ. ವಶಪಡಿಸಿಕೊಂಡಂತಹ ಅಕ್ಕಿಗೂ ಹಾಗು ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಿಜವಾದ ಆರೋಪಿತರನ್ನು ರಕ್ಷಣೆ ಮಾಡುವ ಸಲುವಾಗಿ ಆರೋಪಿಯ ವಿರುದ್ದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಲೋಡ್ ಮಾಡಿದ ಪ್ರಮಾಣ ಹಾಗೂ ಶಾಲೆಗೆ ಸರಬರಾಜು ಆದ ಪ್ರಮಾಣ ಸರಿಯಾಗಿತ್ತು ಎಂದರೆ ಸರಿ. ಆ ಕಾರಣದಿಂದ ಆರೋಪಿಯ ಗೋಡೌನಿಂದ ವಶಪಡಿಸಿಕೊಂಡಂತಹ ಅಕ್ಕಿ ಅಕ್ಷರ ದಾಸೋಹ ಅಕ್ಕಿ ಅಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.